

Large serving: Iran continues to be one of India's most significant destinations for basmati rice. KAMAL NARANG

Rice exporters seek Commerce Ministry's help to clear payments

The Hindu Bureau
NEW DELHI

Rice exporters sought the Union Commerce Ministry's help on Tuesday to clear pending dues from importers in Iran amid growing civil unrest in that country, one of the major importers of basmati and other varieties of Indian rice. While Iran continues to be one of India's most significant destinations for basmati rice, the current financial year has seen growing stress on order flows, payment cycles, and shipment schedules due to the prevailing instability in the country, the Indian Rice Exporters Federation (IREF) has said in an advisory issued to its members.

The IREF's office-bearers met senior Commerce Ministry officials and apprised them of the situation. The IREF said in a release that the immediate fallout of the situation in Iran is evident in Indian markets too, where basmati prices have softened sharply within days.

"Exporters must exercise heightened caution, particularly with respect to credit exposure and shipment timelines," the IREF's statement said. India exported 5.99 lakh tonnes of basmati rice worth $468.10 million to Iran during April-November of the 2025-26 financial year, according to the IREF. The prices of popular domestic basmati rice varieties, including 1121, 1509, and 1718, have fallen by about ₹5 in a week.

"Iran has historically been a pillar market for Indian basmati. However, the current internal turmoil has disrupted trade channels, slowed payments and dented buyer confidence," the IREF's national president Prem Garg said in the statement.

"Importers have conveyed their inability to honour existing commitments and remit payments to India, creating uncertainty for exporters," the IREF said.

The Hindu Pg.15

ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಕಳೆದ ನವೆಂಬರ್‌ನಲ್ಲಿ ದೇಶೀಯ ಚಹಾ ಉತ್ಪಾದನೆ ಶೇ.16.29ರಷ್ಟು ಇಳಿಕೆಯಾಗಿದೆ. ಕಾಫಿ ರಫ್ತು 2025ರಲ್ಲಿ ದಾಖಲೆ 2 ಶತಕೋಟಿ ಡಾಲರ್‌ಗಿಂತಲೂ ಹೆಚ್ಚಳವಾಗಿದೆ.



ಕಾಫಿ ರಫ್ತು ಹೆಚ್ಚಳ ಚಹಾ ಉತ್ಪಾದನೆ ಕುಸಿತ

- ರಷ್ಯಾದಿಂದ ಅಧಿಕ ಕಾಫಿ ಆಮದು
- ಹವಾಮಾನ ವೈಪರೀತ್ಯ
- ನವೆಂಬರ್‌ನಲ್ಲಿ ಚಹಾ ಇಳುವರಿ ಇಳಿಕೆ

ಕಾಫಿ, ಚಹಾ ವಿಷಯದಲ್ಲಿ ಇತ್ತೀಚೆಗೆ ಎರಡು ವಿಭಿನ್ನ ಚಿತ್ರಣ ಕಂಡುಬಂದಿದೆ. ಅದೇನೆಂದರೆ ಕಾಫಿ ರಫ್ತು ಹೆಚ್ಚಾಗಿದ್ದರೆ ಚಹಾ ಉತ್ಪಾದನೆ ಕಡಿಮೆಯಾಗಿ ಬೆಲೆ ಹೆಚ್ಚಳವಾಗುವ ಸಾಧ್ಯತೆ ಕಂಡುಬಂದಿದೆ. ಎಂದಿನಂತೆ ಹವಾಮಾನ ವೈಪರೀತ್ಯ ತನ್ನ ಆಟ ಆಡಿದೆ.

ಮೊದಲು ಸಂತಸದ ಸಮಾಚಾರದತ್ತ ಗಮನ ಹರಿಸೋಣ. ಈ ಬಾರಿ ನಮ್ಮ ಮಿತ್ರರಾಷ್ಟ್ರ ರಷ್ಯಾ ಹೆಚ್ಚಿನ ಆಸಕ್ತಿ ತೋರಿಸಿ ಏರಿದ ಚಟುವಟಿಕೆಗೆ ಮುಂದಾದ ಪರಿಣಾಮ ಕಾಫಿ ರಫ್ತು 2025ರಲ್ಲಿ ದಾಖಲೆ 2 ಶತಕೋಟಿ ಡಾಲರ್‌ಗಿಂತಲೂ ಹೆಚ್ಚಳವಾಗಿದೆ. ಕಳೆದ ವರ್ಷದಲ್ಲಿದ್ದ 1.679 ದಶಲಕ್ಷ ಡಾಲರ್‌ಗೆ ಹೋಲಿಸಿದರೆ ಶೇ.22ರಷ್ಟು ವೃದ್ಧಿಯಾಗಿದೆ. ಅರೇಬಿಕಾ ಮತ್ತು ಇನ್‌ಸ್ಟಂಟ್ ಕಾಫಿ ಶಿಪ್‌ಮೆಂಟ್(ಹಡಗಿಗೆ ಹಾಕಿದ ಸರಕಿನ ಪ್ರಮಾಣ) ಹೆಚ್ಚಾಗಿದ್ದರೂ ಒಟ್ಟಾರೆ ರಫ್ತು ಪ್ರಮಾಣ 3.48 ಲಕ್ಷ ಟನ್‌ದಷ್ಟಾಗಿ ಶೇ.4.5ರಷ್ಟು ಕಡಿಮೆಯಾಗಿದೆ. ಇನ್ನು ಮೌಲ್ಯದ ಲೆಕ್ಕದಲ್ಲಿ ಹೇಳುವದಾದರೆ 17,911 ಕೋಟಿ ರೂ ಮೌಲ್ಯದ ಕಾಫಿ ಶಿಪ್‌ಮೆಂಟ್ ಆಗಿದ್ದು, ಕಳೆದ ಬಾರಿಯಲ್ಲಿದ್ದ 14,046 ಕೋಟಿ ರೂಗಿಂತ ಶೇ.27ರಷ್ಟು ಹೆಚ್ಚಳವಾಗಿದೆ.

ಜಾಗತಿಕ ಮಟ್ಟದಲ್ಲಿ ಬೆಲೆಯೂ ಹೆಚ್ಚಳವಾಗಿದ್ದು, ಪ್ರತಿ ಟನ್‌ಗೆ 4.65 ಲಕ್ಷ ರೂ ಬೆಲೆ ದೊರಕಿದೆ. ಕಳೆದ ವರ್ಷದಲ್ಲಿದ್ದ 3.48 ಲಕ್ಷ ರೂಗಿಂತ ಶೇ.33ರಷ್ಟು ಜಾಸ್ತಿಯಾಗಿದೆ. 2025ರಲ್ಲಿ ಅರೇಬಿಕಾ ಪಾರ್ಚ್‌ಮೆಂಟ್ ಮಾದರಿ ಕಾಫಿ ರಫ್ತು 38,326 ಟನ್‌ದಷ್ಟಾಗಿದ್ದು, ಶೇ.5.5ರಷ್ಟು ಜಾಸ್ತಿಯಾಗಿದೆ. ಇದೇ ಅವಧಿಯಲ್ಲಿ ರೋಬಸ್ಟಾ ಪಾರ್ಚ್‌ಮೆಂಟ್ 24,612 ಟನ್‌ದಷ್ಟಾಗಿದ್ದು, ಹಿಂದಿನ ಸಾಲಿನಲ್ಲಿದ್ದ 24,988 ಟನ್‌ಗಿಂತ ಶೇ.1.5ರಷ್ಟು ಇಳಿಕೆಯಾಗಿದೆ. ಇನ್‌ಸ್ಟಂಟ್ ಕಾಫಿಯ ಒಟ್ಟಾರೆ ರಫ್ತು 1.53 ಲಕ್ಷ ಟನ್‌ದಷ್ಟಾಗಿದ್ದು, ಹಿಂದಿನ 1.49 ಲಕ್ಷ ಟನ್‌ಗಿಂತ ಶೇ.2.68ರಷ್ಟು ವೃದ್ಧಿಯಾಗಿದೆ. ಇಟಲಿ ಭಾರತದಿಂದ 60,688 ಟನ್ ಆಮದು ಮಾಡಿಕೊಂಡಿದ್ದು, ಮುಂಚೂಣಿ ಖರೀದಿದಾರ ದೇಶವಾಗಿ ಹೊರಹೊಮ್ಮಿದೆ. ರಷ್ಯಾಕ್ಕೆ 31,505 ಟನ್ ರಫ್ತಾಗಿದ್ದು, ಸುಮಾರು ಶೇ.20ರಷ್ಟು ಹೆಚ್ಚಳವಾಗಿದೆ.



ಚಹಾದ ಗೋಳು

ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಕಳೆದ ನವೆಂಬರ್‌ನಲ್ಲಿ ದೇಶೀಯ ಚಹಾ ಉತ್ಪಾದನೆ ಶೇ.16.29ರಷ್ಟು ಇಳಿಕೆಯಾಗಿದೆ. 124.19 ದಶಲಕ್ಷ ಕೆಜಿದಷ್ಟು ಇಳುವರಿ ಬಂದಿದೆ. ಹಿಂದಿನ ಇದೇ ಅವಧಿಯಲ್ಲಿ 148.36 ದಶಲಕ್ಷ ಕೆಜಿದಷ್ಟಿತ್ತು. ದೇಶದ ಪ್ರಮುಖ ಉತ್ಪಾದನಾ ಕೇಂದ್ರಗಳಾದ ಅಸ್ಸಾಮ್, ಪಶ್ಚಿಮಬಂಗಾಳಗಳಲ್ಲಿ ಇಳುವರಿ ಕಡಿಮೆಯಾಗಿದ್ದರೆ ತಮಿಳುನಾಡಿನಲ್ಲಿ ತೃಪ್ತಿಕರವಾಗಿದೆ. ಆದರೆ ಉತ್ತರಭಾರತದಲ್ಲಿ ಇಳುವರಿ 104.68 ದಶಲಕ್ಷ ಟನ್‌ದಷ್ಟಾಗಿದ್ದು, ಸುಮಾರು ಶೇ.18.65ರಷ್ಟು ಕುಸಿದ ಕಾರಣ ಒಟ್ಟಾರೆ ಉತ್ಪಾದನೆಗೆ ದೊಡ್ಡ ಹೊಡೆತ ಬೀಳುವಂತಾಗಿದೆ.

ಚಹಾ ಮಂಡಳಿಯ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಅಸ್ಸಾಮ್‌ದಲ್ಲಿ ನವೆಂಬರ್ ತಿಂಗಳ ಉತ್ಪಾದನೆ 60.76 ದಶಲಕ್ಷ ಕೆಜಿದಷ್ಟಾಗಿದ್ದು, ಕಳೆದ ಇದೇ ಅವಧಿಯಲ್ಲಿದ್ದ 67.96 ದಶಲಕ್ಷ ಕೆಜಿದಷ್ಟಾಗಿ ಶೇ.10.59ರಷ್ಟು ಇಳಿಕೆಯಾಗಿದೆ. ಇತ್ತ ಪಶ್ಚಿಮ ಬಂಗಾಳದಲ್ಲಿ ಇಳುವರಿ 41.27 ದಶಲಕ್ಷ ಕೆಜಿದಷ್ಟಾಗಿದ್ದು, ಶೇ.26.75ರಷ್ಟು ಕಡಿಮೆಯಾಗಿದೆ. ದಕ್ಷಿಣ ಭಾರತದ ಪ್ರಮುಖ ಉತ್ಪಾದನಾ ಕೇಂದ್ರವಾದ ತಮಿಳುನಾಡಿನಲ್ಲಿ ಇಳುವರಿ 14.28 ದಶಲಕ್ಷ ಕೆಜಿದಷ್ಟಾಗಿದ್ದು, ಕಳೆದ ಬಾರಿಯಲ್ಲಿದ್ದ 13.5 ದಶಲಕ್ಷ ಕೆಜಿಗಿಂತ ಹತ್ತಿರ ಶೇ.6ರಷ್ಟು ಏರಿಕೆಯಾಗಿದೆ. ಕೇರಳದಲ್ಲಿ 4.88 ದಶಲಕ್ಷ ಕೆಜಿದಷ್ಟಾಗಿದ್ದರೆ, ಕರ್ನಾಟಕದಲ್ಲಿ 0.35 ದಶಲಕ್ಷ ಕೆಜಿದಷ್ಟಾಗಿದ್ದು, ಹತ್ತಿರ ಸುಮಾರು ಶೇ.33ರಷ್ಟು ಇಳಿಕೆಯಾಗಿದೆ.

Samyuktha Kar. Pg.10

BNCC sells 300kg compost in organic fertiliser drive

Bengaluru: The Bengaluru North City Corporation (BNCC) on Tuesday launched an organic fertiliser sale campaign as part of its initiative to convert wet waste generated within wards into compost. At the composting unit in Dollar's Colony in Ward 18, around 300 kg of compost suitable for plants and trees was sold at Rs 150 per kg. The sale generated a total revenue of Rs 45,000, officials said. BNCC Commissioner Pommala Sunil Kumar said the initiative aims to process waste within the respective wards and promote household-level composting to reduce the overall volume of waste. "A dedicated team of BNCC staff works daily towards achieving this objective," he said, urging citizens to actively support and participate in the effort. ENS

Indian Exp. Pg.07

ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಇಂದು ಚಾಲನೆ

ಬೆಂಗಳೂರು: ಗಣರಾಜ್ಯೋತ್ಸವ ಅಂಗವಾಗಿ ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಜ.14ರಿಂದ 26ರವರೆಗೆ ನಡೆಯಲಿರುವ ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಬದುಕು-ಬರಹ ಪರಿಚಯಿಸುವ ತೇಜಸ್ವಿ ವಿಸ್ಮಯ ವಿಷಯಾಧಾರಿತ 219ನೇ ಫಲಪುಷ್ಪ ಪ್ರದರ್ಶನಕ್ಕೆ ಬುಧವಾರ ಚಾಲನೆ ಸಿಗಲಿದೆ.

ಸಂಜೆ 4ಕ್ಕೆ ಸಿಎಂ ಸಿದ್ದರಾಮಯ್ಯ ಪ್ರದರ್ಶನ ಉದ್ಘಾಟಿಸುವರು. ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಎಸ್. ಎಸ್. ಮಲ್ಲಿಕಾರ್ಜುನ್, ರಾಮಲಿಂಗಾ ರೆಡ್ಡಿ, ಶಾಸಕ ಉದಯ್ ಬಿ. ಗರುಡಾ ಚಾರ್, ಸಂಸದ ತೇಜಸ್ವಿ ಸೂರ್ಯ ಪಾಲ್ಗೊಳ್ಳಲಿದ್ದಾರೆ.

ಪಾರ್ಕಿಂಗ್ ವ್ಯವಸ್ಥೆ: ಫಲಪುಷ್ಪ ಪ್ರದರ್ಶನಕ್ಕೆ ಆಗಮಿಸುವವರ ವಾಹನ ನಿಲುಗಡೆಗಾಗಿ ಜೋಡಿ ರಸ್ತೆಯ ಶಾಂತಿನಗರ ಬಸ್ ನಿಲ್ದಾಣದ ಬಳಿ ಇರುವ ಬಹು ಮಹಡಿ ವಾಹನ ನಿಲುಗಡೆ, ಹಾಪ್ ಕಾಮ್ಸ್ ಆವರಣದಲ್ಲಿ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ.

Kannada Prabha Pg.04

ಕೃಷಿ ಉತ್ಪನ್ನಗಳ ಖರೀದಿ ಅವಧಿ ವಿಸ್ತರಣೆ

ಬೆಂಗಳೂರು: ಬೆಂಬಲ ಬೆಲೆ ಯೋಜನೆಯಲ್ಲಿ ಶೇಂಗಾ ಸೇರಿದಂತೆ ಹಲವು ಕೃಷಿ ಉತ್ಪನ್ನಗಳ ಖರೀದಿ ಅವಧಿ ವಿಸ್ತರಣೆ ಮಾಡಲಾಗಿದೆ ಎಂದು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ. ಶೇಂಗಾ ಮತ್ತು ಸೋಯಾಬೀನ್ ಖರೀದಿ ಅವಧಿಯನ್ನು ಜ.26ರವರೆಗೆ ಹಾಗೂ ಹೆಸರುಕಾಳು, ಉದ್ದಿನಕಾಳು ಮತ್ತು ಸೂರ್ಯಕಾಂತಿ ಖರೀದಿ ಅವಧಿಯನ್ನು ಜ.22ರವರೆಗೆ ವಿಸ್ತರಣೆ ಮಾಡಲಾಗಿದೆ. ಈ ಎಲ್ಲ ಉತ್ಪನ್ನಗಳ ಖರೀದಿ ಅವಧಿ ಈಗಾಗಲೇ ಅಂತ್ಯವಾಗಿದ್ದು, ಖರೀದಿ ಪ್ರಕ್ರಿಯೆ ಅವಧಿ ವಿಸ್ತರಣೆ ಮಾಡಬೇಕು ಎಂಬ ಬೇಡಿಕೆ ಬಂದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

Hosa Digantha Pg.08

ಆಂಧ್ರದಿಂದ ಕಡಲೆಕಾಯಿ ಆಗಮನ | ತಮಿಳುನಾಡು ಮಾಳಿಗೆ ಹೂವು ಆವಕ | ಎಳ್ಳು ಬೆಲ್ಲ ದುಬಾರಿ

ಸಂಕ್ರಾಂತಿ ಹಬ್ಬಕ್ಕೆ ಹೂವು, ಹಣ್ಣು ಬೆಲೆ ಏರಿಕೆ

ಈ ಮೊದಲು ಅವರೆಕಾಯಿ, ಕಡಲೆಕಾಯಿ, ಗೆಣಸು, ಹೂವು ಬೆಲೆ ಕಡಿಮೆ ಇತ್ತು. ಹಬ್ಬ ಸಮಿಸುತ್ತಿದ್ದಂತೆ ಪ್ರತಿ ಕಿಲೋಗೆ 20-30 ರು. ಸಹಜವಾಗಿ ಏರಿಕೆಯಾಗಿದೆ, ಎಷ್ಟೇ ದರ ಏರಿಕೆಯಾದರೂ ನಮ್ಮ ಹಿಂದು ಸಂಪ್ರದಾಯದಂತೆ ಹಬ್ಬ ಮಾಡಲೇಕು. -ಶಿಲ್ಪಾ ಆರ್, ಗ್ರಾಹಕಿ, ಬೆಂಗಳೂರು

ಹೂವಪ್ಪ ಐ. ಹೆಚ್. ಬೆಂಗಳೂರು

ಸುಗ್ಗಿ ಹಬ್ಬ ಸಂಕ್ರಾಂತಿ, ವರ್ಷದ ಮೊದಲನೇ ಹಬ್ಬವೂ ಹೌದು. ಸುಗ್ಗಿ ಹಬ್ಬ ಎಂದೇ ಕರೆಯುವ ಸಂಕ್ರಾಂತಿ ಆಚರಣೆಗೆ ಸಜ್ಜಾಗಿರುವ ಜನರಿಗೆ ಬೆಲೆ ಏರಿಕೆ ಬಿಸಿ ಸರಿಯಾಗಿಯೇ ತಟ್ಟಿದೆ. ಏರಿಕೆ ಸಂಭ್ರಮ ಜೋರಾಗಿದೆ. ಬೆಲೆ ಏರಿಕೆ ನಡುವೆಯೂ ನಗರದ ಮಾರುಕಟ್ಟೆಯಲ್ಲಿ ಕಬ್ಬು, ಗೆಣಸು, ಕಡಲೆಕಾಯಿ, ಅವರೆಕಾಯಿ ಮಾರಾಟವು ಭರದಿಂದ ಸಾಗಿದೆ. ಜನರು ಅಳೆದು ತೂಗಿ ಹಬ್ಬದ ಏರಿಕೆ ಮಾಡುತ್ತಿದ್ದಾರೆ. ಹೊಸ ವರ್ಷದ ಮೊದಲ ಹಬ್ಬ ಎಂಬ ಕಾರಣಕ್ಕೆ ಅದ್ದೂರಿ ವ್ಯಾಪಾರ ನಡೆದಿದೆ.

ತಲುಪಿದೆ. ಕಡಲೆಕಾಯಿ ಕೆ.ಜಿಗೆ ಸಗಟು 70-80 ರು. ಚಿಲ್ಲರೆ ದರ 100-110 ರು. ಮಾರಾಟವಾಗುತ್ತಿದೆ. ಕಟಿಂಗ್ ಬೆಲ್ಲ ಕೆ.ಜಿಗೆ ಚಿಲ್ಲರೆ ದರ 90-120 ರು, ಗೆಣಸು 40-60 ರು., ಕಬ್ಬು ಒಂದು ಜಾಲ್ಲಿಗೆ 50-60 ರು. ಅಗತ್ಯ ವಸ್ತುಗಳಾದ ಅಗತ್ಯ ಅಡುಗೆ ಎಣ್ಣೆ ಬೇಳೆ, ಬೇಳೆಕಾಳುಗಳ ಬೆಲೆ ಏರಿಕೆಯಾಗಿದೆ.

ಹೂಗಳ ಬೆಲೆಯೂ ಏರಿಕೆ: ಸೇವಂತಿಗೆ ಹೂವು ಹೊರತುಪಡಿಸಿ ಮಲ್ಲಿಗೆ, ಕಾಕಡ ಸುಗಂಧರಾಜ ಹಿಂದಿನಗಿಂತ ಕೆ.30ರಷ್ಟು ಹೂವು ದರ ಏರಿಕೆಯಾಗಿದೆ, ಹಣ್ಣುಗಳ ಬೆಲೆಯೂ ಏರಿಕೆಯಾಗಿದೆ. ಡಾಲಬ್ರಿ ಕೆ.ಜಿ.ಗೆ 200-250 ರೂ. ಶೇಬು





'ಎಳ್ಳು ಬೆಲ್ಲ ಹಂಚಿ ಒಳ್ಳೆಯ ಮಾತನಾಡು' ಎಂಬ ಉತ್ತಮ ಸಂದೇಶ ಸಾರುವ ಹಬ್ಬಕ್ಕೆ ಶೇಂಗಾ, ಎಳ್ಳು-ಬೆಲ್ಲ, ಹೂವು-ಹಣ್ಣು ತರಕಾರಿ ಹೀಗೆ ಎಲ್ಲ ಅಗತ್ಯ ವಸ್ತುಗಳ ಏರಿಕೆಯಾಗಿದ್ದು ಜನರ ಜೇಬಿಗೆ ಕತ್ತರಿ ಬಿದ್ದಿದೆ.

ಬೆಲೆ ದುಬಾರಿ: ಮಾರುಕಟ್ಟೆಯಲ್ಲಿ ಹಬ್ಬಕ್ಕೆ ಬೇಕಾದ ಸರಕುಗಳೆಲ್ಲ ಕಳೆದ ಸಾಲಿಗಿಂತ ಶೇ. 25ರಷ್ಟು ದುಬಾರಿಯಾಗಿದೆ. ಬೆಂಗಳೂರಿನಲ್ಲಿ ಅವರೆಕಾಯಿ ಬೆಲೆ ಸಗಟು ದರ 40-50 ರು.ಇದ್ದು, ಚಿಲ್ಲರೆ ದರ ಪ್ರತಿ ಕೆ.ಜಿ.ಗೆ 70 ರು.ನಿಂದ 80 ರು.ವರೆಗೂ

220-270 ರು. ದ್ರಾಕ್ಷಿ 220-240 ರು. ಏಲಕ್ಕಿ ಬಾಳೆ ಹಣ್ಣು 70-80 ರು.ಆಗಿದೆ. ಹಣ್ಣು ಹೂವುಗಳಿಗೆ ಹೋಲಿಸಿದರೆ ತರಕಾರಿ ಬೆಲೆಯಲ್ಲಿ ಹೇಳಿ ಕೊಳ್ಳುವಂತಹ ಏರಿಕೆಯಾಗಿಲ್ಲ.

ಕ್ಯಾರೆಟ್, ಬೀನ್ಸ್, ನುಗ್ಗೆಕಾಯಿ ಹೊರತುಪಡಿಸಿ ಬೆಂಡೆಕಾಯಿ, ಹೂವು ಕೋಸ್, ಎಲೆಕೋಸ್, ಬದನೇಕಾಯಿ, ಬಿಟ್ರೋಟ್, ಮೂಲಂಗಿ ಸೌತೆಕಾಯಿ, ಹಿರೇಕಾಯಿ, ಬಟಾಣಿಕಾಯಿ 30-60 ರು. ಒಳಗೆ ಮಾರಾಟವಾಗುತ್ತಿದೆ. ಕ್ಯಾರೆಟ್, ಬೀನ್ಸ್, ಗೊರಿಕಾಯಿ 60-80 ರು. ಗೆ ಮಾರಾಟವಾಗುತ್ತಿದೆ.

ಆಗಸ್ಟ್ ತಿಂಗಳ ಬಾರೀ ಮಳೆಯಿಂದ ಬೆಳೆ ಇಳುವರಿ ಕುಸಿತ ಕಂಡಿದೆ. ಸರಬರಾಜು ಕಡಿಮೆಯಾಗಿ ಬೆಲೆ ಏರಿಕೆಗೆ ಕಾರಣವಾಗಿದೆ. ಹಾಗಾಗಿ ಈ ಸಂಕ್ರಾಂತಿಗೆ ಗ್ರಾಹಕರು ಕಡಿಮೆ ಪ್ರಮಾಣದಲ್ಲಿ ಏರಿಕೆಗೆ ಬರಬಹುದು ಎಂಬ ಆತಂಕ ಕಾಡುತ್ತಿದೆ. -ಗೋವಿಂದಪ್ಪ ವ್ಯಾಪಾರಿ, ಕೆ ಆರ್ ಮಾರುಕಟ್ಟೆ

ಕೆ.ಆರ್. ಮಾರುಕಟ್ಟೆ ದರ

ಪ್ರತಿ ಕೆ. ಹೂವು

ಸೇವಂತಿಗೆ	50-120 ರು.
ಕನಕಾಂಬರ	500-650 ರು.
ಕಾಕಡ ಮಲ್ಲಿಗೆ	400-550 ರು.
ಗುಂಡು ಮಲ್ಲಿಗೆ	1,400-2,500 ರು.
ಕಣಗಲ	200-300 ರು.
ಗುಲಾಬಿ	140-170 ರು.

ಕೆ.ಆರ್. ಮಾರುಕಟ್ಟೆ ದರ

ಪ್ರತಿ ಕೆ.ಜಿ ತರಕಾರಿ

ನುಗ್ಗೆಕಾಯಿ	300-350 ರು.
ಗ್ರೀನ್ ಬಟಾಣಿ	50-60 ರು.
ಬೀನ್ಸ್	60-70 ರು
ತೊಗರಿಕಾಯಿ	60-70 ರು.
ಕ್ಯಾರೆಟ್	60-80 ರು.
ಬೆಂಡೇಕಾಯಿ	50-60 ರು.
ಟೊಮೆಟೊ	30-40 ರು.

ಸಂಕ್ರಾಂತಿ ವಿಶೇಷ ಪರಿಕರಿಗಳು

ಪ್ರತಿ ಕೆ.ಜಿ.ಗೆ

ಎಳ್ಳು ಬೆಲ್ಲ ಮಿಶ್ರಿತ	400-450 ರು
ಕಡಲೆಕಾಯಿ	100-120 ರು.
ಅವರೆಕಾಯಿ	70-80 ರು.
ಕಟ್ ಮಾಡಿದ ಬೆಲ್ಲ	100-120 ರು.
ಕಟ್ ಮಾಡಿದ ಕೊಬ್ಬರಿ	350-400 ರು.
ಗೆಣಸು	50-60 ರು.
ಏಲಕ್ಕಿ	70-80 ರು.
ಪಚ್ಚಬಾಳೆ	35-40 ರು.

ಎಳ್ಳು ಬೆಲ್ಲ ಮಿಶ್ರಿತ ಪೊಟ್ಟಣಗಳು ವಿವಿಧ ಗಾತ್ರಗಳಲ್ಲಿ ಲಭ್ಯ ಇವೆ. ಸಣ್ಣ ಪೊಟ್ಟಣದ ಒಂದು ಕೆ.ಜಿ.ಯ ಎಳ್ಳುಬೆಲ್ಲ ಮಿಶ್ರಿತ ಪೊಟ್ಟಣದ ದರ 350ರಿಂದ 450 ರು. ಇದೆ. ಅರ್ಧ ಕೆ.ಜಿ ಸಕ್ಕರೆ ಅಚ್ಚು 150ರಂತೆ ಮಾರಾಟವಾಗುತ್ತಿದೆ.

ಬೆಂಗಳೂರಿನ ಪ್ರಮುಖ ರಸ್ತೆಗಳಲ್ಲಿ ತಾತ್ಕಾಲಿಕ ಅಂಗಡಿ ತೆರೆದಿದ್ದರೂ ನಗರದ ಗಾಂಧಿ ಬಜಾರ್ ಯಶವಂತಪುರ, ಮಲ್ಲೇಶ್ವರಂ ಕೋರಮಂಗಲ ಹಾಗೂ ಕೆ.ಆರ್. ಮಾರುಕಟ್ಟೆಯಲ್ಲಿ ಉತ್ತಮ ವ್ಯಾಪಾರ ನಡೆದಿದೆ. ರಾಶಿ ರಾಶಿ ಕಬ್ಬು, ಅವರೆಕಾಯಿ, ಗೆಣಸನ್ನು ವ್ಯಾಪಾರಿಗಳು ಮಾರಾಟ ಮಾಡುತ್ತಿದ್ದು, ಹಬ್ಬಗಳಲ್ಲಿ ಬೆಳೆ ಏರಿಕೆ ಸಹಜ, ಹೀಗಾಗಿ ಗ್ರಾಹಕರು ಅಳೆದು ತೂಗಿ ಚೌಕಾಸಿ ಮಾಡಿ ಏರೀದಿ ಮಾಡುತ್ತಿದ್ದಾರೆ ಎನ್ನುತ್ತಾರೆ ಮಲ್ಲೇಶ್ವರಂ ವ್ಯಾಪಾರಿ ಸಂತೋಷ್ ಕುಮಾರ್.

ನೆಲಗಡಲೆ ಕಬ್ಬು ಬೇಡಿಕೆ: ಸಂಕ್ರಾಂತಿ ಹಬ್ಬಕ್ಕೆ ವಿಶೇಷ ಎಂದರೆ ಕಡಲೆಕಾಯಿ, ಕಬ್ಬು, ಅದರಲ್ಲೂ ಕರಿಕಬ್ಬಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ನಮ್ಮ ರಾಜ್ಯದಲ್ಲಿ ಇದನ್ನು ಹೆಚ್ಚಾಗಿ ಬೆಳೆಯುವುದಿಲ್ಲ, ತಮಿಳುನಾಡಿನಿಂದ ಈ ಕಬ್ಬು ಹೆಚ್ಚಿನ ಪ್ರಮಾಣದಲ್ಲಿ ಸರಬರಾಜಾಗುತ್ತಿದೆ. ಇನ್ನೊಂದೆಡೆ, ನೆಲಗಡಲೆ ನಮ್ಮಲ್ಲಿ ಬೆಳೆದರೂ ಅಂಧ್ರಪ್ರದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದು, ಹಬ್ಬದ ಕಾರಣ ಬೆಲೆಯಲ್ಲೂ ಏರಿಕೆಯಾಗಿದೆ ಎಂದು ಹೇಳುತ್ತಾರೆ ಕಡಲೆಕಾಯಿ ವ್ಯಾಪಾರಿ ಸುಂದರ್. ಹಬ್ಬದ ದಿನ ನೆಲಗಡಲೆ ಜೊತೆ ಅವರೆಕಾಯಿಯನ್ನು ಬೇಯಿಸಿ ತಿನ್ನುವುದು ಸಂಪ್ರದಾಯ. ಈಗಲೂ ಈ ನಿಯಮ ಮುಂದುವರಿದಿದೆ.

ಹಳ್ಳಿಗಳಲ್ಲಿ ಹಳೇ ಸೊಗಡಿನಲ್ಲೆ ಹಬ್ಬ: ಈ ಬಾರಿ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿತ್ತು. ಹೀಗಾಗಿ ಹೊಸ ವರ್ಷದ ಮೊದಲ ಹಬ್ಬ ಸಂಕ್ರಾಂತಿಯನ್ನು ಭರ್ಜರಿಯಾಗಿ ಆಚರಿಸಲು ಜನರು ಸಿದ್ಧತೆಗಳನ್ನು ನಡೆಸಿದ್ದಾರೆ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಸಂಕ್ರಾಂತಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸುತ್ತಿದ್ದು, ಈಗಲೂ ಕೆಲವು ಗಳು ನಡೆಯುತ್ತಿರುವುದು ವಿಶೇಷ.

Vishwa Vani Pg.02

INDIA'S FRESH FOOD SHIFT IN 2025



In a year dominated by hyper-convenience, India's fresh food consumption in 2025 revealed a quieter but telling shift in consumer behaviour. While speed-led commerce grabbed headlines, data from homegrown zero-stock fresh commerce startup Handpickd shows that growth in fresh food was driven less by experimentation and indulgence, and more by consistency, frequency and trust. Urban consumers ordered not in bulk but in small, timely top-ups, reflecting a move away from pantry-loading toward meal-time purchases. Even as large platforms battled over discounts on staples, Handpickd's data pointed to a microdelivery revolution. What urban India ordered fresh in 2025:

Coriander topped urban vegetable consumption, overtaking staples like onion and potato across all formats of the platform

24,000+
The **'dhania-mirchi combo'** orders became one of the most frequently reordered SKUs of the year



5,90,149
Orders in **Gurugram**, which led the fresh food consumption wave, recording **4-5x** higher volume than other cities



14,659
Orders of exotic produce, including avocados, coloured capsicums, and broccoli, jumped **20 times** YoY, from 689 orders in 2024



22,249
Orders of **Banana Robusta** made it the most-preferred fruit, anchoring everyday fruit baskets



13,000+
Fresh **coconut water** orders reflected a growing shift towards natural hydration over packaged beverages



- **Fresh malai paneer** ranked among the top-selling dairy SKUs, highlighting preference for products that feel close to homemade quality



- Adoption of **ozonised** produce rose sharply from **4%** to **38%** in one year, signalling increased consumer focus on clean and safe food



COMPILED BY: HRITHIK KIRAN BAGADE

SOURCE: HANDPICKD

Deccan Herald Pg.16

ಬೆಂಬಲ ಬೆಲೆ: ಶೇಂಗಾ ಸೇರಿ ಹಲವು ಕೃಷಿ ಉತ್ಪನ್ನ ಖರೀದಿ ಅವಧಿ ವಿಸ್ತರಣೆ

ಜ.22ರವರೆಗೆ ಹೆಸರು, ಉದ್ದು, ಸೂರ್ಯಕಾಂತಿ ಖರೀದಿಗೆ ಅವಕಾಶ

■ ಉದಯವಾಣಿ ಸಮಾಚಾರ



ಬೆಂಗಳೂರು: ಬೆಂಬಲ ಬೆಲೆ ಯೋಜನೆಯಲ್ಲಿ ಶೇಂಗಾ ಸೇರಿದಂತೆ ಹಲವು ಕೃಷಿ ಉತ್ಪನ್ನಗಳ ಖರೀದಿ ಅವಧಿ ವಿಸ್ತರಣೆ ಮಾಡಲಾಗಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದ್ದಾರೆ. ರಾಜ್ಯದಲ್ಲಿ ಇದುವರೆಗೆ 3.06 ಲಕ್ಷ ಹೆಕ್ಟೇರ್‌ನಲ್ಲಿ ಶೇಂಗಾ ಬಿತ್ತನೆ ಗುರಿ ಇತ್ತು. ಆದರೆ, 1.34 ಲಕ್ಷ ಹೆಕ್ಟೇರ್‌ನಲ್ಲಿ ಶೇಂಗಾ ಬಿತ್ತನೆಯಾಗಿದ್ದು, 3.98 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಆಗಬೇಕಿದ್ದ ಸೋಯಾ ಬೀನ್ 4.096 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಆಗಿದೆ. ಈಗ ಶೇಂಗಾ ಮತ್ತು ಸೋಯಾಬೀನ್ ಖರೀದಿ ಅವಧಿಯನ್ನು ಜ.26ರವರೆಗೆ ಹಾಗೂ ಹೆಸರುಕಾಳು, ಉದ್ದಿನಕಾಳು ಮತ್ತು ಸೂರ್ಯಕಾಂತಿ ಖರೀದಿ ಅವಧಿಯನ್ನು ಜ.22ರವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಬೆ	ಖರೀದಿ ಕೇಂದ್ರ	ನೋಂದಾಯಿತ ರೈತರು	ಮಾರಾಟ ಮಾಡಿದ ರೈತರು	ಖರೀದಿ (ಕ್ವಿಂ.)
ಹೆಸರು ಕಾಳು	214	26059	6149	57454
ಉದ್ದಿನಕಾಳು	137	9183	7138	93342
ಸೂರ್ಯಕಾಂತಿ	84	6873	6330	82590
ಸೋಯಾಬೀನ್	236	50179	35134	426985
ಶೇಂಗಾ	51	1563	911	7951

Udaya Vani Pg.08

3.76 ಲಕ್ಷ ರೈತರಿಗೆ ಯಂತ್ರ ವಿತರಣೆ

ಬೆಂಗಳೂರು: ಆಧುನಿಕ ಕೃಷಿ ಪದ್ಧತಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಅನುಷ್ಠಾನಗೊಂಡಿರುವ ಕೃಷಿ ಯಂತ್ರಧಾರೆ, ಕೃಷಿ ಯಾಂತ್ರೀಕರಣ ಯೋಜನೆಗಳಡಿ 2022-23ರಿಂದ 2025ರ ನವೆಂಬರ್ ಅಂತ್ಯಕ್ಕೆ ಸಬ್ಸಿಡಿ ಯೋಜನೆಯಡಿ ಒಟ್ಟು 3,76,342 ರೈತರಿಗೆ ಯಂತ್ರೋಪಕರಣ ವಿತರಿಸಲಾಗಿದೆ.

2022-23ರಲ್ಲಿ 53,004, 2023-24ರಲ್ಲಿ 1,16,181, 2024-25ರಲ್ಲಿ 1,37,435 ಮತ್ತು 2025ರ ನವೆಂಬರ್ ಅಂತ್ಯಕ್ಕೆ 69,722 ರೈತರಿಗೆ ವಿವಿಧ ಯಂತ್ರೋಪಕರಣ ನೀಡಲಾಗಿದೆ. ಕೃಷಿ ಯಂತ್ರಗಳ ಖರೀದಿಗೆ ಕೃಷಿ ಇಲಾಖೆ ಸಬ್ಸಿಡಿ ನೀಡುತ್ತಿದೆ. ಕೆಲ ಯೋಜನೆಗಳಿಗೆ ಶೇ.90ರವರೆಗೆ ಸಹಾಯಧನ ಸಿಗುತ್ತಿದ್ದು, ರೈತರು ಹತ್ತಿರದ ಕೃಷಿ ಇಲಾಖೆ ಕಚೇರಿ ಅಥವಾ ರೈತ ಸಂಪರ್ಕ ಕೇಂದ್ರಗಳ ಮೂಲಕ ಅರ್ಜಿ ಸಲ್ಲಿಸಬಹುದು. ಇನ್ನು ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನವಾಗಿರುವ ವಿವಿಧ ಅಭಿವೃದ್ಧಿ ಯೋಜನೆಗಳಡಿ 3 ವರ್ಷದಲ್ಲಿ ಪ್ರತ್ಯೇಕವಾಗಿ 52,745 ರೈತರಿಗೆ ಉಪಕರಣ ನೀಡಲಾಗಿದೆ.

- ಕೃಷಿ ಸಲಕರಣೆಗಳಿಗೆ ಬೇಡಿಕೆ ಹೆಚ್ಚಳ
- ಇನ್ನಷ್ಟು ಅನುದಾನಕ್ಕೆ ಮನವಿ

ಕೃಷಿ ಭಾಗ್ಯ ಕಾರ್ಯಕ್ರಮದಡಿ ಕೃಷಿ ಹೊಂಡದೊಂದಿಗೆ ಸೋಲಾರ್, ಡೀಸೆಲ್ ಪಂಪ್‌ಸೆಟ್‌ಗೆ ಶೇ.90 ಸಹಾಯಧನ ಇದಲಿದೆ. ಕಳೆ ಕೀಳುವ ಯಂತ್ರ, ಪವರ್ ಟಿಲ್ಲರ್ ಸೇರಿ ಕೃಷಿ ಸಲಕರಣೆಗಳಿಗೆ ಶೇ. 90 ರಿಯಾಯಿತಿ ದೊರೆಯಲಿದೆ.



428 ಕೋಟಿ ರೂ. ಮೀಸಲು

ಪ್ರಸಕ್ತ ಸಾಲಿನಲ್ಲಿ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲು ಕೇಂದ್ರ, ರಾಜ್ಯ ಸರ್ಕಾರ ಸೇರಿ ಒಟ್ಟು 428 ಕೋಟಿ ರೂ. ಮೀಸಲಿಟ್ಟಿವೆ. ಇದರಲ್ಲಿ 319 ಕೋಟಿ ರೂ. ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ. ಉಳಿದ ಮೊತ್ತವನ್ನು ರೈತರಿಗೆ ಸಹಾಯಧನ ಒದಗಿಸಲಾಗುತ್ತಿದೆ. ವರ್ಷದಿಂದ ವರ್ಷಕ್ಕೆ ಯಂತ್ರೋಪಕರಣಗಳಿಗೆ ಬೇಡಿಕೆ ಬರುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಅನುದಾನ ನೀಡುವಂತೆ ಕೇಂದ್ರಕ್ಕೆ ರಾಜ್ಯ ಸರ್ಕಾರ ಕೋರಿದೆ.

ರೈತರಿಗೆ ಹಲವು ಪ್ರಯೋಜನ

ಯಂತ್ರೋಪಕರಣ, ಸಲಕರಣೆಗಳ ಬಳಕೆಯಿಂದ ರೈತರು ಕೃಷಿ ಚಟುವಟಿಕೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತಿದೆ. ದುಬಾರಿ ಯಂತ್ರಗಳನ್ನು ಖರೀದಿಸುವ ಮತ್ತು ನಿರ್ವಹಿಸುವ ಹೆಚ್ಚಿನ ವೆಚ್ಚ ಉಳಿಸುತ್ತಿದ್ದಾರೆ. ಸಣ್ಣ ರೈತರಿಗೆ ಸುಧಾರಿತ ಕೃಷಿ ತಂತ್ರಜ್ಞಾನ ಬಳಸಲು ಅವಕಾಶ ಸಿಗುತ್ತದೆ.

Vijaya Vani Pg.15